**ಸಿ.ಸಿ. ನಂ. 888/2025** **ಪ್ರಾಸಾಃ1**

ಸಾಕ್ಷಿಯನ್ನು ಪುನಃ ಕರೆಯಿಸಿ **ದಿ.12.08.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

**1.** ನಾನು ಎಂ.ಬಿ.ಎ ಪದವೀಧರಳು ಹಾಗೂ early childhood care and education ನಲ್ಲಿ ಡಿಪ್ಲೋಮೋ ಮಾಡಿರುತ್ತೇನೆ. ನಾನು ಕಾಂಗರೂ ಕಿಡ್ಸ್ ಎಂಬ ಪ್ರೀ-ನರ್ಸರಿ ಮತ್ತು ಕಿಂಡರ್ ಗಾರ್ಡನ್ ಶಾಲೆಯನ್ನು ಸುಮಾರು 10 ವರ್ಷಗಳಿಂದ ನೆಡೆಸುತ್ತಿದ್ದೇನೆ. ನನಗೆ ವಾರ್ಷಿಕವಾಗಿ ಅಂದಾಜು ರೂ.30 ಲಕ್ಷ ಆದಾಯ ಇರುತ್ತದೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಾನು ಆದಾಯ ತೆರಿಗೆ ರಿಟನ್ಸ್ ಪಾವತಿ ಮಾಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು 2020 ರಿಂದ ಆದಾಯ ಪಾವತಿ ಮಾಡುತ್ತಿದ್ದೇನೆ ಎಂದರೆ ಅದಕ್ಕೂ ಮುಂಚಿನಿಂದಲೂ ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ನನ್ನ 2020 ರಿಂದ 2024 ರ ವರೆಗಿನ ಆದಾಯ ತೆರಿಗೆ ರಿಟನ್ಸ್ ಮತ್ತು ಲೆಕ್ಕ ಪಟ್ಟಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನಗೆ ವಾರ್ಷಿಕವಾಗಿ ರೂ.30 ಲಕ್ಷ ವರಮಾನ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನಗೆ ವಾರ್ಷಿಕವಾಗಿ ರೂ.30 ಲಕ್ಷ ವರಮಾನ ಇರುವುದಿಲ್ಲ ಹಾಗಾಗಿ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಾನು ಪ್ರೀ-ನರ್ಸರಿ ಮತ್ತು ಕಿಂಡರ್ ಗಾರ್ಡನ್ ಶಾಲೆಯನ್ನು ನೆಡೆಸುತ್ತಿದ್ದೇನೆ ನನಗೆ ರೂ.30 ಲಕ್ಷ ವಾರ್ಷಿಕ ವರಮಾನ ಇದೆ ಎಂದು ನನ್ನ ದೂರಿನಲ್ಲಿ ಹೇಳಿರುವುದಿಲ್ಲ. ಈ ಬಗ್ಗೆ ಹೇಳಲು ತೊಂದರೆ ಇತ್ತಾ ಎಂದು ಕೇಳಿದಕ್ಕೆ ಸಾಕ್ಷಿಯು ಅದರ ಅಗತ್ಯ ಇರಲಿಲ್ಲ ಎಂದು ಹೇಳುವರು.

**2.** ಆರೋಪಿ ನನಗೆ ಪರಿಚಯ ಇರುತ್ತಾರೆ ಅವರು ನಮ್ಮ ಕುಟುಂಬದ ಸ್ನೇಹಿತರು. ಅವರು ನನಗೆ 15 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ಇಸ್ಕಾನ್ ಗೆ 15 ವರ್ಷಗಳ ಹಿಂದೆ ಬರುತ್ತಿದ್ದರು ಆಗ ನನಗೆ ಪರಿಚಯ ಆಗಿರುತ್ತಾರೆ. ಆರೋಪಿ ಸಹ ಶಿಕ್ಷಕಿಯಾಗಿದ್ದರು ನನಗೂ ಸಹ ಆ ವಿಷಯ ದಲ್ಲಿ ಆಸಕ್ತಿ ಇತ್ತು ಹಾಗಾಗಿ ನಾವಿಬ್ಬರು ಸ್ನೇಹಿತರಾಗಿರುತ್ತೇವೆ. ನಾನು ಆರೋಪಿಯ ಮನೆಗೆ ಅಗತ್ಯ ವಿದ್ದಾಗ ಹೋಗಿರುತ್ತೇನೆ. ಆರೋಪಿ ಮನೆಯಲ್ಲಿ ಅವರು ಮತ್ತು ಅವರ ಸಹೋದರಿ ಮಾತ್ರ ಇದ್ದರು. ಆರೋಪಿ ಮನೆಗೆ ನಾನು 8-10 ವರ್ಷಗಳ ಹಿಂದೆ ಹೋಗಿರುತ್ತೇನೆ. ಆಗ ಆರೋಪಿ ಗೋಕುಲಂ ನಲ್ಲಿ ರೂಪ ಎಲೈಟ್ ಹೋಟೇಲ್ ಬಳಿ ವಾಸವಿದ್ದರು. ಆರೋಪಿ ಮೈಸೂರು ಯುನಿರ್ವಸಿಟಿಯಲ್ಲಿ ಪ್ರಾಧ್ಯಾಪಕರಾಗಿದ್ದರು. ಆರೋಪಿಯ ಸಹೋದರಿ ಮಹಾಜನ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಆರೋಪಿ ಮತ್ತು ನಾನು ಒಟ್ಟಿಗೆ ತೆಗೆಸಿಕೊಂಡಿರುವ ಭಾವ ಚಿತ್ರಗಳು ಇದೆಯೋ ಇಲ್ಲವೋ ನೋಡಬೇಕಾಗುತ್ತದೆ ಇದ್ದರೆ ಅದನ್ನು ಹಾಜರುಪಡಿಸುತ್ತೇನೆ. ಆರೋಪಿ ಸೆಪ್ಟೆಂಬರ್ ಮೂರು ಅಥವಾ

ನಾಲ್ಕನೇ ವಾರದಲ್ಲಿ 2022 ನೇ ಸಾಲಿನಲ್ಲಿ ಒಬ್ಬರೇ ಬಂದು ನನ್ನ ಮನೆಯಲ್ಲಿ ಸಾಲವನ್ನು ಕೇಳಿರುತ್ತಾರೆ. ಆರೋಪಿ ಯಾವ ವಾರದ ದಿವಸದಂದು ಬಂದಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ ಆದರೆ ಅವರು week day ನಲ್ಲಿ ಬಂದಿರುತ್ತಾರೆ. ಅವರು ಸಂಜೆ ಸುಮಾರು 05.30 ರಿಂದ 06.00 ಗಂಟೆ ಸಮಯದಲ್ಲಿ ಬಂದಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ನನ್ನ ಮಗ ಮನೆಯಲ್ಲಿದ್ದೆವು. ನಾನು ಆರೋಪಿಗೆ ಯಾವ ಕಾರಣಕ್ಕಾಗಿ ಸಾಲಬೇಕು ಎಂದು ಕೇಳಿರುತ್ತೇನೆ ಆದರೆ ಅವರು ಕಾರಣವನ್ನು ಹೇಳಲು ಇಷ್ಟ ಪಟ್ಟಿರುವುದಿಲ್ಲ ನಾನು ಸಹ ಒತ್ತಾಯ ಮಾಡಿರುವುದಿಲ್ಲ, ವೈಯಕ್ತಿಕ ವಿಚಾರ ಇರಬಹುದು ಎಂದು ಸುಮ್ಮನಾಗಿರುತ್ತೇನೆ. ಆರೋಪಿ ಕೇಳಿದ ತಕ್ಷಣ ನಾನು ಸಾಲವನ್ನು ಕೊಟ್ಟಿರುವುದಿಲ್ಲ. ಆರೋಪಿಗೆ ಅಕ್ಟೋಬರ್‌–2022 ರಲ್ಲಿ ಸಾಲವನ್ನು ನಾನು ಕೊಟ್ಟಿರುತ್ತೇನೆ, ದಿನಾಂಕ ದಿವಸ ನನಗೆ ನೆನಪಿರುವುದಿಲ್ಲ. ನಾನು ಸಾಲವನ್ನು ನಗದು ಮೂಲಕ ಕೊಟ್ಟಿರುತ್ತೇನೆ. ನಾನು ರೂ.10 ಲಕ್ಷ ಹಣವನ್ನು ನಗದು ಮೂಲಕವೇ ಕೊಟ್ಟಿರುತ್ತೇನೆ. ರೂ.50 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಚೆಕ್ ಮುಖಾಂತರವೇ ಕೊಡಬೇಕೆಂದು ಕಾನೂನು ಇದೆ ಎಂದರೆ ಸರಿ, ರೂ.10 ಲಕ್ಷದಷ್ಟು ಹಣವನ್ನು ನಗದು ರೂಪದಲ್ಲಿ ಕಾನೂನು ಇರುತ್ತದೆ ಎಂದರೆ ಸರಿ ಆದರೆ ನಾನು ಆ ಸಮಯದಲ್ಲಿ ಕಟ್ಟಡ ಖರೀದಿಸಲು ನಗದು ರೂಪದಲ್ಲಿ ಮನೆಯಲ್ಲಿ ಇಟ್ಟು ಕೊಂಡಿದ್ದೆ ಆ ಮೊತ್ತದಲ್ಲಿ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನನ್ನ ಬಳಿ ರೂ.10 ಲಕ್ಷ ಹಣ ಇತ್ತು, ಆ ಹಣದಲ್ಲಿ ಸ್ವಲ್ಪ ಹಣ ಮಕ್ಕಳ ಶಾಲಾ ಶುಲ್ಕದಿಂದ ಬಂದಿರುತ್ತದೆ, ನನ್ನ ಬಳಿ ಸ್ವಲ್ಪ ಉಳಿತಾಯದ ಹಣ ಸ್ವಲ್ಪ ಇತ್ತು. ಆ ಸಮಯದಲ್ಲಿ ನನ್ನ ಬಳಿ ಉಳಿತಾಯದ ಹಣ ಅಂದಾಜು ರೂ.3 ಲಕ್ಷ ಹಣ ಇತ್ತು. ಉಳಿದ ಹಣ ಮಕ್ಕಳ ಶಾಲಾ ಶುಲ್ಕದಿಂದ ಬಂದಿತ್ತು. ಈ ಬಗ್ಗೆ ನನ್ನ ದೂರಿನಲ್ಲಿ ಹೇಳಿರುವುದಿಲ್ಲ. ಈ ವಿಷಯವನ್ನು ನನ್ನ ದೂರಿನಲ್ಲಿ ಹೇಳಲು ನನಗೆ ತೊಂದರೆ ಇರಲಿಲ್ಲ.

**3**. ಆರೋಪಿಗೆ ರೂ.10 ಲಕ್ಷ ಹಣವನ್ನು ಕೊಟ್ಟಿರುವ ಬಗ್ಗೆ ನಾನು ನನ್ನ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ಘೋಷಣೆ ಮಾಡಿರುವುದಿಲ್ಲ. ಈ ವಿಷಯವನ್ನು ನನ್ನ ರಿಟರ್ನ್ಸ್ ನಲ್ಲಿ ಘೋಷಣೆ ಮಾಡಲು ನನಗೆ ತೊಂದರೆ ಇರಲಿಲ್ಲ ಆದರೆ ಆರೋಪಿ ಶೀಘ್ರವಾಗಿ ಮರುಪಾವತಿ ಮಾಡಲು ಒಪ್ಪಿರುತ್ತಾರೆ ಹಾಗಾಗಿ ನಾನು ಘೋಷಿಸಿಕೊಂಡಿರುವುದಿಲ್ಲ. 2022 ರ ಪೂರ್ವದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರ ಆಗಿರುತ್ತದೆ. 2022 ರ ಪೂರ್ವದಲ್ಲಿ ನಾನು ಆರೋಪಿಗೆ ರೂ.5 ಲಕ್ಷ ಅಥವಾ ರೂ.10 ಲಕ್ಷ ಹಣ ಕೊಟ್ಟಿರುತ್ತೇನೆ ನನಗೆ ಸರಿಯಾಗಿ ನೆನಪಿಲ್ಲ ದಾಖಲೆಯನ್ನು ನೋಡಬೇಕಾಗುತ್ತದೆ. ಆ ಹಣವನ್ನು ನಾನು ಬ್ಯಾಂಕ್ ಮುಖಾಂತರ ಆರೋಪಿಗೆ ವರ್ಗಾವಣೆ ಮಾಡಿರುತ್ತೇನೆ. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಆ ಸಾಲವನ್ನು ಆರೋಪಿ ನನಗೆ ನಗದು ಮುಖಾಂತರ ಹಿಂದಿರುಗಿಸಿರುತ್ತಾರೆ. 2022 ರ ಪೂರ್ವದಲ್ಲಿ ನೆಡೆದ ಸಾಲದ ವ್ಯವಹಾರದ ಬಗ್ಗೆ ನಾನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ. ನಂದ ಕಿಶೋರ್ ಎಂಬುವವರು ನನ್ನ ಗಂಡ.

**4.** ನನ್ನ ಗಂಡ Mysuru employee co–operative society, Gangotri, Mysuru ನಲ್ಲಿ ಸೆಕ್ರೆಟರಿ ಆಗಿರುತ್ತಾರೆ ಎಂದರೆ ಸರಿ. ಆರೋಪಿ ಸಹ ಗಂಗೋತ್ರಿಯಲ್ಲಿ ಪ್ರಾಧ್ಯಾಪಕರಾಗಿದ್ದರು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಅನ್ಯೋನ್ಯವಾಗಿ ಇದ್ದೇವೆ. ನಾನು ಮತ್ತು ನನ್ನ ಗಂಡ ನಮ್ಮಿಬ್ಬರ ಹಣಕಾಸಿನ ವ್ಯವಹಾರದ ಬಗ್ಗೆ ಹಂಚಿಕೊಳ್ಳುತ್ತೇವೆ ಎಂದರೆ ಅಗತ್ಯ ಇದ್ದಾಗ ಹಂಚಿಕೊಳ್ಳುತ್ತೇವೆ ನಾವಿಬ್ಬರು ಎಲ್ಲಾ ವಿಚಾರಗಳನ್ನು ಮಾತನಾಡಿಕೊಳ್ಳುತ್ತೇವೆ ಎಂದರೆ ಸರಿ. ಅಗತ್ಯ ವಿದ್ದಾಗ ಮಾತನಾಡಿಕೊಳ್ಳುತ್ತೇವೆ. ಆರೋಪಿಗೆ ಸಾಲ ಕೊಟ್ಟ ವಿಚಾರವನ್ನು ನಾನು ನನ್ನ ಗಂಡನಿಗೆ ತಿಳಿಸಿರುತ್ತೇನೆ. ನನ್ನ ಗಂಡ ಬೇರೆ ವ್ಯಕ್ತಿಗಳಿಗೆ ಸಾಲ ಕೊಟ್ಟಿರುವ ವಿಚಾರ ನನಗೆ ತಿಳಿಸಿರುತ್ತಾರೆ. ನನ್ನ ಗಂಡ ಬಡ್ಡಿ ವ್ಯವಹಾರ ಮಾಡುವುದಿಲ್ಲ. ನನ್ನ ಗಂಡ ಅವರ ಸ್ನೇಹಿತ ವಿಶ್ವನಾಥ್ ಎಂಬುವವರಿಗೆ ಮತ್ತು ಪುಟ್ಟಪ್ಪ ಎಂಬುವವರಿಗೆ ಸಾಲ ಕೊಟ್ಟಿರುವ ಬಗ್ಗೆ ನನಗೆ ಹೇಳಿರುತ್ತಾರೆ. ಆರೋಪಿ ಗಂಗೋತ್ರಿಯ ಕೋ ಆಪರೇಟಿವ್ ಸೊಸೈಟಿಯಿಂದ ಆಗಾಗ ಕೈಸಾಲವನ್ನು ಪಡೆಯುತ್ತಿದ್ದರು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಆರೋಪಿಗೆ ನನ್ನ ಗಂಡ ನಿಂತು ಸಾಲವನ್ನು ಕೊಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ನನ್ನ ಗಂಡ ಮತ್ತು ಆರೋಪಿ ಪರಿಚಯ ಆಗಿರುತ್ತಾರೆ ಎಂದರೆ ಇರಬಹುದು. ನಾನು ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿ ಆರೋಪಿ ನ್ಯಾಯಾಲಯಕ್ಕೆ ಹಾಜರಾದಾಗಲೇ ಅವರು ನನ್ನನ್ನು ಪ್ರಥಮ ಬಾರಿಗೆ ನೋಡಿರುತ್ತಾರೆ ಅದಕ್ಕೂ ಮುನ್ನಾ ಅವರು ನನ್ನನ್ನು ಭೇಟಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಕುಟುಂಬದ ಸ್ನೇಹಿತರೂ ಆಗಿರುವುದಿಲ್ಲ, 2022 ರಲ್ಲಿ ನನ್ನಿಂದ ಸಾಲವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. 2022 ರ ಪೂರ್ವದಲ್ಲಿ ಯೂ ಸಹ ನಾನು ಆರೋಪಿಗೆ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣ ಕಾಸಿನ ವ್ಯವಹಾರ ನೆಡೆದಿರುವುದಿಲ್ಲ ನನಗೂ ಮತ್ತು ಆರೋಪಿಗೂ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ನನ್ನ ಗಂಡ ಆರೋಪಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. ಆರೋಪಿ ನನ್ನ ಗಂಡನಿಂದ ಆಗಾಗ 1 ಲಕ್ಷ, 2 ಲಕ್ಷ ಹಣ ಸಾಲ ಪಡೆಯುತ್ತಿದ್ದರು ಎಂದರೆ ಸಾಲ ಪಡೆದಿರುತ್ತಾರೆ ಎಂದು ಗೊತ್ತಿರುತ್ತದೆ ಎಷ್ಟು ಮೊತ್ತ ಎಂದು ಗೊತ್ತಿರುವುದಿಲ್ಲ. ಆ ರೀತಿ ಸಾಲವನ್ನು ನನ್ನ ಗಂಡನಿಂದ ಪಡೆಯುತ್ತಿದ್ದಾಗ ಆರೋಪಿ ನನ್ನ ಗಂಡನಿಗೆ ಚೆಕ್ ಕೊಟ್ಟಿರುತ್ತಾರೆ ಎಂದರೆ ಸರಿ ಆ ಚೆಕ್ ಅನ್ನು ನನ್ನ ಗಂಡ ನಗದೀಕರಿಸಿಕೊಂಡಿರುತ್ತಾರೆ. 2024 ರಲ್ಲಿ ಆರೋಪಿ ನನ್ನ ಗಂಡನಿಗೆ ರೂ.10 ಲಕ್ಷ ಹಣ ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ನನಗೆ ರೂ.10 ಲಕ್ಷ ಹಣ ಕೊಡಬೇಕಾಗಿತ್ತು. ಆರೋಪಿ ನನ್ನ ಗಂಡನಿಗೆ ಸುಮಾರು ಹಣ ಬ್ಯಾಂಕ್ ಮುಖಾಂತರ ಮತ್ತು ನಗದು ರೂಪದಲ್ಲಿ ಕೊಟ್ಟಿರುತ್ತಾರೆ ಹಾಗೂ ಚೆಕ್ ಅನ್ನು ಕೊಟ್ಟು ಅದು ನಗದೀಕರಣ ಸಹ ಆಗಿರುತ್ತದೆ ಹೀಗೆ ರೂ.8 ಲಕ್ಷ ಹಣ ವನ್ನು ಆರೋಪಿ ನನ್ನ ಗಂಡನಿಗೆ ಹಿಂದಿರುಗಿಸಿರುತ್ತಾರೆ ಎಂದರೆ ಆರೋಪಿ ಎಷ್ಟು ಹಣ ನನ್ನ ಗಂಡನಿಗೆ ಕೊಟ್ಟಿರುತ್ತಾರೆ

ಎಂದು ನನಗೆ ಗೊತ್ತಿರುವುದಿಲ್ಲ ಆದರೆ ನನ್ನ ಗಂಡನಿಂದ ಪಡೆದ ಸಂಪೂರ್ಣ ಹಣವನ್ನು ಹಿಂದಿರುಗಿಸಿರುತ್ತಾರೆ ಎಂದು ಹೇಳುವರು.

**5.** ಆರೋಪಿಯಿಂದ ನನ್ನ ಗಂಡನಿಗೆ ಚೆಕ್ ಸಂಖ್ಯೆ: 394666 ರಿಂದ 394674 ರ ವರೆಗೆ ಒಟ್ಟು 09 ಖಾಲಿ ರುಜು ಮಾಡಿದ ಚೆಕ್ ಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ರೂ.8 ಲಕ್ಷ ಸಾಲ ತೀರಿಸಿದ್ದರೂ ಸಹ ಆರೋಪಿಯ 09 ಚೆಕ್ ಗಳನ್ನು ನನ್ನ ಗಂಡ ವಾಪಸ್ಸು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ಚೆಕ್ ಗಳನ್ನು ಆರೋಪಿ ನನಗೆ ದಿಃ 16 ಅಥವಾ 17 ನೇ ಮಾರ್ಚ್ 2025 ರಂದು ಆರೋಪಿ ಒಬ್ಬರೇ ಸಂಜೆ 06.00 ಗಂಟೆ ಸಮಯದಲ್ಲಿ ನನ್ನ ಮನೆಯಲ್ಲಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ನನ್ನ ಮಗ ಇದ್ದೆವು. ಆರೋಪಿಯೇ ಚೆಕ್ ಅನ್ನು ಬರೆದು ಕೊಂಡು ಬಂದಿರುತ್ತಾರೆ. ನಿಪಿ.1 ಮತ್ತು 2 ಚೆಕ್ ಗಳಲ್ಲಿ ದಿನಾಂಕಃ 19/03/2025 ಎಂದು ಇರುತ್ತದೆ ಎಂದರೆ ಸರಿ. ಆರೋಪಿ ಒಂದೇ ಚೆಕ್ ಅನ್ನು ಕೊಡಬಹುದಿತ್ತು ಎರಡು ಚೆಕ್ ಗಳನ್ನು ಏಕೆ ಕೊಡುತ್ತಿದ್ದೀರಾ ಎಂದು ವಿಚಾರಿಸಿರುತ್ತೀರಾ ಎಂದು ಕೇಳಿದಕ್ಕೆ ಸಾಕ್ಷಿಯು ವಿಚಾರಿಸಿರುತ್ತೇನೆ ಆರೋಪಿ ಮೊದಲಿಗೆ ರೂ.5 ಲಕ್ಷಕ್ಕೆ ಚೆಕ್ ಅನ್ನು ಕೊಟ್ಟಿರುತ್ತಾರೆ ನಾನು ಸಂಪೂರ್ಣ ಹಣ ವಾಪಸ್ಸು ಬೇಕು ಎಂದು ಕೇಳಿದಕ್ಕೆ ಮುಂಚಿತವಾಗಿ ಬರೆದಿದ್ದ ಇನ್ನೊಂದು ಚೆಕ್‌ಅನ್ನು ನನಗೆ ಕೊಟ್ಟಿರುತ್ತಾರೆ. ನನ್ನ ಗಂಡ ಆರೋಪಿಯಿಂದ ಪಡೆದ ಖಾಲಿ ರುಜು ಮಾಡಿದ 09 ಚೆಕ್ ಗಳಲ್ಲಿ ಎರಡು ಚೆಕ್ ಗಳನ್ನು ನನ್ನ ಮುಖಾಂತರ ಬ್ಯಾಂಕ್ ಗೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ಚೆಕ್ ಗಳಲ್ಲಿ ಸಹಿ ಗಳನ್ನು ಹೊರತುಪಡಿಸಿ ಉಳಿದ ಬರವಣಿಗೆ ಆರೋಪಿಯದಲ್ಲ ಎಂದರೆ ಸರಿಯಲ್ಲ. ನಿಪಿ.01 ಮತ್ತು 2 ರಲ್ಲಿ ಹೆಸರು, ದಿನಾಂಕ, ಸಹಿ ಮತ್ತು ಮೊತ್ತಗಳ ಶಾಹಿಗಳು ಎಲ್ಲಾ ಬೇರೆ ಬೇರೆ ಎಂದರೆ ಸರಿಯಲ್ಲ. ದಿನಾಂಕದಲ್ಲಿ ಬರೆದಿರುವ 5 ರ ಬರವಣಿಗೆ ಮತ್ತು ಮೊತ್ತದಲ್ಲಿ ಬರೆದಿರುವ 5 ರ ಬರವಣಿಗೆ ಬೇರೆ ಬೇರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಬರವಣಿಗೆಯಲ್ಲಿ ವ್ಯತ್ಯಾಸ ಇರುವುದು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ರೂ.2 ಲಕ್ಷ ಹಣ ಕೊಡಬೇಕಾಗಿತ್ತು ಆರೋಪಿಯಿಂದ ಹೆಚ್ಚು ಹಣ ಪಡೆಯುವ ದುರುದ್ದೇಶದಿಂದ ನನ್ನ ಗಂಡ ಅವರ ಬಳಿ ಇದ್ದ ಆರೋಪಿಗೆ ಸೇರಿದ ಖಾಲಿ ರುಜು ಮಾಡಿದ ಚೆಕ್ ಗಳ ಪೈಕಿ 2 ಚೆಕ್ ಗಳನ್ನು ನನ್ನ ಮುಖಾಂತರ ಬ್ಯಾಂಕ್ ಗೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರು ನಂದ ಕಿಶೋರ್ ಆಗಿದ್ದರೂ ಸಹ ನಾನು ಆರೋಪಿಗೆ ನೋಟೀಸು ಕೊಡುವ ಸಮಯದಲ್ಲಿ ನನ್ನ ಗಂಡನ ಹೆಸರು ನಂದ ಕೃಷ್ಣ ಎಂದು ಬರೆಸಿರುತ್ತೇನೆ ಎಂದರೆ ನನಗೆ ಈಗಲೇ ಈ ವಿಚಾರ ಗೊತ್ತಾಗಿರುತ್ತದೆ. ನನ್ನ ದೂರಿನ ಶೀರ್ಷಿಕೆಯಲ್ಲಿಯೂ ಸಹ ನನ್ನ ಗಂಡನ ಹೆಸರು ನಂದ ಕೃಷ್ಣ ಎಂದು ಇರುತ್ತದೆ ಎಂದರೆ ಬೆರಳಚ್ಚಿನ ದೋಷದಿಂದ ಆ ರೀತಿ ಆಗಿರಬಹುದು ಎಂದು ಹೇಳುವರು. ನಾನು ಆರೋಪಿಗೆ ನೋಟೀಸನ್ನು ಆರೋಪಿಯ ಮನೆ ಸಂಖ್ಯೆ: 34, ಮಾನಸ, 2 ಸ್ಟೇಜ್, 2 ಕ್ರಾಸ್,

ಬೋಗಾದಿ, ಟೆಲಿಕಾಂ ಲೇಔಟ್, ಮೈಸೂರು–570026 ಇಲ್ಲಿಗೆ ಕಳುಹಿಸಿರುತ್ತೇನೆ ಎಂದರೆ ಸರಿ. ನಾನು ನೋಟೀಸನಲ್ಲಿ ಕೊಟ್ಟಿರುವ ವಿಳಾಸ ತಪ್ಪಾಗಿರುವ ಕಾರಣ ಸದರಿ ನೋಟಿಸು ಆರೋಪಿಗೆ ತಲುಪಿರುವುದಿಲ್ಲ ಎಂದರೆ ಸರಿ. Addressee can not be located ಎಂದು ವಾಪಸ್ಸು ಬಂದಿರುತ್ತದೆ ಎಂದರೆ ಸರಿ. ನಾನು ದೂರನ್ನು ಸಲ್ಲಿಸಬೇಕಾದರೆ ಆರೋಪಿಯ ವಿಳಾಸ ಮನೆ ಸಂಖ್ಯೆ 34, ಮಾನಸ, 2 ಸ್ಟೇಜ್, ಬೋಗಾದಿ, ಟೆಲಿಕಾಂ ಲೇಔಟ್, ಮೈಸೂರು–570026 ಎಂದು ನಮೂದು ಮಾಡಿರುತ್ತೇನೆ ಹಾಗಾಗಿ ಅದು ಆರೋಪಿಗೆ ಜಾರಿಯಾಗಿರುತ್ತದೆ, ನಾನು ನೋಟೀಸಿನಲ್ಲಿ ತಪ್ಪು ವಿಳಾಸ ಕೊಟ್ಟ ಕಾರಣ ನೋಟೀಸು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸು ಜಾರಿಯಾಗಬಾರದು ಎಂಬ ದುರುದ್ದೇಶದಿಂದ ನಾನು ತಪ್ಪು ವಿಳಾಸ ನಮೂದು ಮಾಡಿ ನೋಟೀಸು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಹಾಗಾಗಿ ನನಗೆ ಚೆಕ್ ಗಳನ್ನು ಬ್ಯಾಂಕ್ ಗೆ ನಗದೀಕರಣಕ್ಕಾಗಿ ಹಾಜರುಪಡಿಸುವ ಹಕ್ಕು ಮತ್ತು ಅಧಿಕಾರ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹೆಚ್ಚು ಹಣ ಪಡೆಯುವ ಉದ್ದೇಶದಿಂದ ನಾನು ಮತ್ತು ನನ್ನ ಗಂಡ ಇಬ್ಬರು ಸೇರಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸು ಕಳುಹಿಸುವ ಸಮಯದಲ್ಲಿ ಆರೋಪಿಯ ಫೋನ್ ಸಂಖ್ಯೆಯನ್ನು ನಮೂದಿಸಬಹುದಾಗಿತ್ತು ಅದನ್ನು ಉದ್ದೇಶಪೂರ್ವಕವಾಗಿ ನಾನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೆ ಹಣ ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಎಂದು ಭೇಟಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ನಾನು ಫೋನ್ ನಲ್ಲಿ ಮಾತನಾಡಿರುವುದಿಲ್ಲ ಎಂದರೆ ಸರಿ. ನಾನು ಈ ದೂರನ್ನು ಸಲ್ಲಿಸಿದ ನಂತರ ಆರೋಪಿ ನನ್ನ ಮತ್ತು ನನ್ನ ಗಂಡನ ವಿರುದ್ಧ ಜಯಲಕ್ಷ್ಮೀ ಪುರಂ ಪೋಲೀಸ್ ಠಾಣೆ, ಮೈಸೂರಿನಲ್ಲಿ ನಾವು ಆರೋಪಿಯ ಚೆಕ್ ಗಳನ್ನು ದುರುಪಯೋಗ ಮಾಡಿಕೊಂಡಿದ್ದೇವೆ ಎಂದು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಗಂಡ ಜಯಲಕ್ಷ್ಮೀ ಪುರಂ ಪೋಲೀಸ್ ಠಾಣೆ ಯಲ್ಲಿ ಕೊಟ್ಟಿರುವ ಹೇಳಿಕೆಯಲ್ಲಿ ಆರೋಪಿಯಿಂದ 9 ಚೆಕ್ ಗಳನ್ನು ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಆರೋಪಿಯಿಂದ ಹೆಚ್ಚಿನ ಲಾಭ ಪಡೆಯುವ ಉದ್ದೇಶ ದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಿ ಕೇಳಿ ಸರಿ ಇದೆ**

**4 ನೇ ಪ್ರ. ದ. ನ್ಯಾ. ದಂ. ಮೈಸೂರು.**